ಮಾಡಬೇಡಿ. ನಾವು ಮಾಡಿಕೊಂಡಿರುವ ಸಮಸ್ಯೆಗಳನ್ನು ನಾವೇ ನಿವಾರಿಸಿಕೊಳ್ತೀವಿ' ಎಂದಳು. ಶಾರದಾ ಅತ್ತೆ, `ಅಯ್ಯೋ ನೀವಿಬ್ಬರೂ ಅಮೇರಿಕಾದಲ್ಲಿ ಸಂತೋಷವಾಗಿ ಇದ್ದೀರಿ ಅಂತ ನಾವೆಲ್ಲರೂ ಅಂದುಕೊಂಡಿದ್ದೀವಲ್ಲೆ' ಎಂದು ಸೀರೆ ಸೆರಗಿನಲ್ಲಿ ಕಣ್ಣೀರು ಒರಸಿಕೊಂಡರು. ದಮಯಂತಿ ಮತ್ತು ತೇಜಸ್ ಕಥೆಗಳನ್ನು ಕೇಳಿದ ನಾವು ದಮಯಂತಿಯನ್ನು ಬೆಂಗಳೂರಿಗೆ ಬಂದುಬಿಡುವಂತೆ ಎಷ್ಟೇ ಗೋಗರೆದರೂ ಅವಳು ಒಪ್ಪಿಕೊಳ್ಳಲಿಲ್ಲ. ಒಂದು ತಿಂಗಳು ನಮ್ಮ ಜೊತೆಗಿದ್ದ ದಮಯಂತಿ ಮತ್ತು ಪುಟ್ಟ ಸಾವಿತ್ರಿ ನಮ್ಮನ್ನು ಬಿಟ್ಟು ಅಮೇರಿಕಾಗೆ ವಾಪಸ್ ಹೋದಾಗ ನಾವು ಎರಡು ದಿನಗಳು ಏನನ್ನೂ ತಿನ್ನಲೇ ಇಲ್ಲ. ಸಾವಿತ್ರಿಯಂತೂ ಇಡೀ ದಿನ ಅಳುತ್ತಲೇ ಇದ್ದಳು. ದಮಯಂತಿ ಎಷ್ಟು ಅತ್ತಳೊ ತಿಳಿಯಲಿಲ್ಲ. ದಮಯಂತಿಗೆ ಬೆಂಗಳೂರಿನಲ್ಲಿ ನಡೆದ ಅನ್ಯಾಯದಿಂದ ಅವಳು ಅಮೇರಿಕಾಗೆ ಹೋಗಿ ಜಾನ್ನನ್ನು ಮೆಚ್ಚಿ ಮದುವೆ ಆಗಿದ್ದಳು. ಆದರೆ ಅಲ್ಲಿಯೂ ಅವಳಿಗೆ ನೆಮ್ಮದಿ ಸಿಕ್ಕಲಿಲ್ಲ. ಮಕ್ಕಳು ತಮ್ಮ ದಾರಿ ತಾವು ನೋಡಿಕೊಂಡರೂ ಅಷ್ಟೆ. ತಂದೆ ತಾಯಿ ಅವರಿಗೆ ದಾರಿ ತೋರಿಸಿದರೂ ಹಾಗೆ ಆಗುತ್ತಿತ್ತೊ ಏನೊ? ಭವಿಷ್ಯದಲ್ಲಿ ಏನು ನಡೆಯುತ್ತದೆ ಎನ್ನುವುದು ಮಾತ್ರ ಯಾರಿಗೂ ತಿಳಿಯುವುದಿಲ್ಲ. ಬಹುಶಃ ಅದನ್ನೇ ವಿಧಿ ಎನ್ನುವುದು. ದಮಯಂತಿ ಹೋಗುವಾಗ ನನ್ನ ನಿವೃತ್ತಿಯ ಸಾಕಷ್ಟು ಹಣವನ್ನು ಅವಳಿಗೆ ಕೊಟ್ಟು ಕಳುಹಿಸಿದೆ. ತೇಜಸ್ ಬಂದಾಗ ಕೊಡಲು ಸ್ವಲ್ಪ ಹಣವನ್ನು ಇಟ್ಟುಕೊಂಡಿದ್ದೆ. ನನ್ನ ಮಾವ ಕೂಡ ನಮಗೆ ತಿಳಿಯದೇ ಒಂದಷ್ಟು ಹಣವನ್ನು ದಮಯಂತಿಗೆ ಕೊಟ್ಟಿದ್ದರು ಎಂದು ತಿಳಿಯಿತು.

ರಾತ್ರಿ ನನ್ನ ಪಕ್ಕದಲ್ಲಿ ಮಲಗಿದ್ದ ಸಾವಿತ್ರಿ ಇದ್ದಕ್ಕಿದ್ದ ಹಾಗೆ ನಿದ್ರೆಯಲ್ಲಿ `ತೇಜಸ್... ತೇಜಸ್...' ಎಂದು ಕೂಗಿಕೊಂಡಳು. ನಿದ್ರೆಯಲ್ಲಿದ್ದ ನಾನು ಬೆಡ್ ಲೈಟ್ ಸ್ವಿಚ್ಚ್ ಹಾಕಿ `ಸಾವಿ, ಸಾವಿ, ಎಂದು ಅವಳ ದೇಹವನ್ನು ಅಲ್ಲಾಡಿಸಿದೆ. ಒಮ್ಮೆಲೆ ಹೆದರಿಕೊಂಡಂತೆ ಎದ್ದು ಕುಳಿತ ಸಾವಿತ್ರಿ ಮತ್ತೆ `ತೇಜಸ್... ತೇಜಸ್...' ಎಂದು ನನ್ನ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಇನ್ನೂ ಯಾವುದೋ ಕನಸ್ಸಿನ ಗುಂಗಿನಲ್ಲಿದ್ದ ಸಾವಿತ್ರಿ ಕಣ್ಣುಗಳನ್ನು ಬಿಡುತ್ತ ಏನೊ ಹುಡುಕಾಡುತ್ತಿರುವಂತೆ ದಿಕ್ಕು ದಿಕ್ಕು ನೋಡುತ್ತಿದ್ದಳು. ನಾನು ಮತ್ತೆ `ಸಾವಿ... ಏನಾಯಿತು?' ಎಂದೆ. `ಓ ಇದು ಕನಸೇ...?' ಎನ್ನುತ್ತಾ ಕೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡು ಸಣ್ಣದಾಗಿ ಅಳತೊಡಗಿದಳು. ಯಾವುದೋ ತುಂಬಾ ಕೆಟ್ಟ ಕನಸೇ ಇರಬೇಕು ಎಂದುಕೊಂಡು ಇನ್ನೂ ಎರಡು ವಿದ್ಯುತ್ ದೀಪಗಳನ್ನು ಬೆಳಗಿಸಿದೆ. ಅನಂತರ ಹಾಲ್‌ನಲ್ಲಿ ಡೈನಿಂಗ್ ಟೇಬಲ್ ಮೇಲಿದ್ದ ಜಗ್‌ನಿಂದ ನೀರನ್ನು ಗ್ಲಾಸಿಗೆ ಸುರಿದುಕೊಂಡು ಬಂದು ಕುಡಿಯಲು ಕೊಟ್ಟೆ. ಸಾವಿತ್ರಿ ಇನ್ನೂ ಹಾಗೇ ಹಾಸಿಗೆ ಮೇಲೆ ಕುಳಿತಿದ್ದಳು. ಈಗ ಅವಳ ಪಕ್ಕದಲ್ಲಿ ಕುಳಿತುಕೊಂಡು ನಿಧಾನವಾಗಿ ಬೆನ್ನ ಮೇಲೆ ಕೈ ಇಟ್ಟುಕೊಂಡು `ಸಾವಿ ಏನಾಯಿತು?' ಕೇಳಿದೆ. `ಏನೊ ಕೆಟ್ಟ ಕನಸು ರೀ' ಎಂದಳು. `ಏನು ಅಂತಹ ಕೆಟ್ಟ ಕನಸು? ಹೇಳು ಪರವಾಗಿಲ್ಲ' ಎಂದೆ. `ಅದೊಂದು ವೃದ್ಧಾಶ್ರಮ... ಸುತ್ತಲೂ ಎತ್ತರವಾದ ಗೋಡೆಗಳು... ಗೋಡೆಗಳ ಸುತ್ತಲೂ ಗಿಡಮರಗಳು. ಮಧ್ಯೆ ವೃದ್ಧರನ್ನೆಲ್ಲ ಕೂಡಿ ಹಾಕಿರುವ ಒಂದು ದೊಡ್ಡ ಹಾಲ್‌ನಲ್ಲಿ ಸಾಲು ಸಾಲು ಹತ್ತಾರು ಉಕ್ಕಿನ ಮಂಚಗಳು. ಮಂಚಗಳ ಮೇಲೆ ಕೊಳಕು ಬಟ್ಟೆಗಳ ಹಾಸಿಗೆಗಳು. ಹಾಸಿಗೆಗಳ ಮೇಲೆ ಕುಳಿತುಕೊಂಡು, ಮಲಗಿಕೊಂಡಿರುವ ಅನಾಥ ವೃದ್ಧರು. ಕೆಲವು ವೃದ್ಧರು ಪಕ್ಕಪಕ್ಕ ಕುಳಿತುಕೊಂಡು ನಿಧಾನವಾಗಿ ಮಕ್ಕಳಂತೆ ತೊದಲು ನುಡಿಗಳಲ್ಲಿ ಮಾತನಾಡಿಕೊಳ್ಳುತ್ತಿದ್ದಾರೆ. ಅವರು ಮಾತನಾಡುವುದನ್ನು ನೋಡಿದರೆ ಮುಗಿದು ಹೋದ ಗತಕಾಲ ಅವರ ದೇಹಗಳನ್ನೆಲ್ಲ ಜಜ್ಜಿ ಸುಕ್ಕುಸುಕ್ಕು ಮಾಡಿಬಿಟ್ಟಿದೆ. ಮುಖಗಳಲ್ಲೆಲ್ಲ ಮುಪ್ಪು ತುಂಬಿಕೊಂಡು ಇನ್ನೇನು ಇವತ್ತೊ ನಾಳೆಯೊ ನಾಡಿದ್ದೊ ಅವರನ್ನೆಲ್ಲ ಕಾಲ ನುಂಗಿಕೊಳ್ಳಲು ಬಾಗಿಲಲ್ಲೇ ನಿಂತು ಕಾಯುತ್ತಿದೆ. ಪಾಪ! ಅವರ ಮುಂದೆ ಈಗ ಯಾವ ದಾರಿಯೂ ಇಲ್ಲದಂತೆ ಕಾಣಿಸುತ್ತಿದೆ.

ನನ್ನನ್ನು ಕೈಹಿಡಿದು ಕರೆದುಕೊಂಡು ಬಂದ ತೇಜಸ್ ಆ ವೃದ್ಧರ ಮಧ್ಯೆ ಖಾಲಿ ಇದ್ದ ಒಂದು ಹಾಸಿಗೆ ಮೇಲೆ ಕೂರಿಸಿದ. ನನ್ನ ಕೈಕಾಲುಗಳು ನಡುಗುತ್ತಿದ್ದವು. ನನ್ನ ಪಕ್ಕದಲ್ಲಿ ಕುಳಿತುಕೊಂಡ ತೇಜಸ್ ಸ್ವಲ್ಪ ಹೊತ್ತು ಏನೂ ಮಾತನಾಡಲಿಲ್ಲ. ನನ್ನಿಂದಲೂ ಯಾಕೊ ಏನೂ ಮಾತನಾಡಲು ಆಗಲಿಲ್ಲ. ಅವನ ಕಣ್ಣುಗಳಿಂದ ಕಣ್ಣೀರು ಕೆನ್ನೆಗಳ ಮೇಲೆ ಹರಿಯುತ್ತಿತ್ತು. ಆಗಾಗ ಹೊರಗಡೆಗೆ ನೋಡುತ್ತ ಕುಳಿತಿದ್ದ ತೇಜಸ್ `ಅಮ್ಮ ನಾನು ಇನ್ನು ಬರ್ತೀನಿ. ಧೈರ್ಯವಾಗಿರಮ್ಮ. ಇಲ್ಲಿ ಏನೂ ತೊಂದರೆ ಇಲ್ಲ. ನಾನು ಆಗಾಗ ಬರ್ತಾಯಿರ್ತೀನಿ' ಎಂದು ನನ್ನ ಎರಡೂ ಕೈಗಳನ್ನು ಮೃದುವಾಗಿ ಹಿಡಿದುಕೊಂಡು ಹಾಗೇ ಸ್ವಲ್ಪ ಹೊತ್ತು ಇದ್ದ. ತೇಜಸ್ ನನ್ನ ಮುಖವನ್ನು ನೋಡಲಾಗದೆ ಮುಖವನ್ನು ಪಕ್ಕಕ್ಕೆ ತಿರುಗಿಸಿಕೊಂಡೇ ಇದ್ದ. ಸುತ್ತಲೂ ಹಾಸಿಗೆಗಳ ಮೇಲೆ ಕುಳಿತಿದ್ದ ವೃದ್ಧರೆಲ್ಲ ನನ್ನ ಕಡೆಗೆ ನೋಡುತ್ತಿದ್ದರು. ಅವರ ಕಣ್ಣುಗಳಲ್ಲಿ ಸ್ವಲ್ಪವೂ ಬೆಳಕಿರಲಿಲ್ಲ. ತೇಜಸ್ ಮತ್ತೆ `ಅಮ್ಮ ನಾನು ಬರ್ತೀನಿ' ಎಂದು ಎದ್ದು ನಿಂತ. ಅವನ ತಲೆ ಕೂದಲೂ ಬಿಳಿಯಾಗಿ ಬಿಟ್ಟಿದೆ. ನಾನು ನನ್ನ ಮಗನ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಪ್ರಯತ್ನಿಸಿದೆ. ಆದರೆ ನನ್ನಿಂದ ಅವನ ಕೈಗಳನ್ನು ಹಿಡಿದುಕೊಳ್ಳಲು ಆಗಲಿಲ್ಲ. ತೇಜಸ್ ನಿಧಾನವಾಗಿ ಕೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡು ಹೊರಕ್ಕೆ ನಡೆದೇ ಬಿಟ್ಟ... ಹೊರಕ್ಕೆ ನೋಡಿದರೆ ದೂರದಲ್ಲಿ ಅದಿತಿ ಕಾರಿನ ಪಕ್ಕದಲ್ಲಿ ನಿಂತುಕೊಂಡು ತೇಜಸ್‌ನನ್ನು ಬೇಗನೆ ಬರಲು ಸನ್ನೆ ಮಾಡುತ್ತಿದ್ದಾಳೆ...' ಸಾವಿತ್ರಿ ತನ್ನ ಮಾತುಗಳನ್ನು ಹೇಳಿ ನಿಲ್ಲಿಸಿದಳು.

ಸಾವಿತ್ರಿ ಹೇಳಿದ ಕನಸನ್ನು ಕೇಳಿ ನನಗೂ ಗಾಬರಿಯಾಗಿ ಮೈಯೆಲ್ಲ ಬೆವರಿದಂತೆ ಆಗಿತ್ತು. ತಕ್ಷಣವೇ ನನಗೆ ಏನು ಮಾತನಾಡಬೇಕೊ ಹೊಳೆಯಲಿಲ್ಲ. ಮತ್ತೆ ಸಾವಿತ್ರಿ `ಕೃಷ್ಣ ನನಗೆ ಈ ರೀತಿ ಆಗುತ್ತೇನ್ರಿ? ತೇಜಸ್ ನನ್ನನ್ನ ವೃದ್ಧಾಶ್ರಮದಲ್ಲಿ ಬಿಟ್ಟುಬಿಡ್ತಾನೇನ್ರೀ?' ಎಂದು ಪ್ರಶ್ನಿಸಿದಳು. ಸಾಮಾನ್ಯವಾಗಿ ದುಃಖದ ವಿಷಯಗಳನ್ನು ಮಾತನಾಡುವಾಗ ಸಾವಿತ್ರಿ ನನ್ನನ್ನು ಹೆಸರಿಟ್ಟು ಕರೆಯುವುದಿಲ್ಲ. ಸಾವರಿಸಿಕೊಂಡ ನಾನು `ಸಾವಿ. ಕನಸುಗಳು ಎಷ್ಟೊ ಬರುತ್ತೆ ಹೋಗುತ್ತೆ. ಅದಕ್ಕೆಲ್ಲ ತಲೆ ಕೆಡಿಸಿಕೊಂಡ್ರೆ ಆಗುತ್ತಾ?' ಎಂದು ಸಮಾಧಾನ ಹೇಳಿದೆ. ಸಾವಿತ್ರಿ ಮತ್ತೆ ನಿಧಾನವಾಗಿ `ನನಗೆ ಒಂದೇ ಒಂದು ಆಸೆ ಇದೇರಿ' ಎಂದಳು. `ಅದೇನು ಆಸೆ? ಇಷ್ಟೊತ್ತು ರಾತ್ರಿಯಲ್ಲಿ?' ಎಂದೆ. ತುಂಬಾ ಗಂಭೀರವಾಗಿ `ನಿಮಗಿಂತ ನಾನು ಮೊದಲು ಸಾಯಬೇಕು' ಎಂದಳು. ಅನಂತರ ಇಡೀ ರಾತ್ರಿ ನಾವಿಬ್ಬರು ಸ್ವಲ್ಪ ಹೊತ್ತು ಮಾತನಾಡುತ್ತ, ಸ್ವಲ್ಪ ಹೊತ್ತು ಮೌನವಾಗುತ್ತ ಬೆಳಗಿನವರೆಗೂ ಕಾಲ ಕಳೆದಿದ್ದೆವು.

***

ದಮಯಂತಿ ಬೆಂಗಳೂರಿಗೆ ಬಂದು ಹೋಗಿ ಎರಡು ತಿಂಗಳಾದ ಮೇಲೆ ತೇಜಸ್ ಬೆಂಗಳೂರಿಗೆ ಬಂದ. ಅವನನ್ನ ನಾನು ಸಾವಿತ್ರಿ, ನನ್ನ ಅತ್ತೆ ಮಾವ ವಿಮಾನ ನಿಲ್ದಾಣಕ್ಕೆ ಹೋಗಿ ಕರೆದುಕೊಂಡು ಬಂದೆವು. ಅವನ ಜೊತೆಗೆ ಅದಿತಿ ಇಲ್ಲದಿರುವುದು ನೋಡಿ ನಮಗೆ ಸ್ವಲ್ಪ ಗಾಬರಿ ಮತ್ತು ಆತಂಕವಾಗಿ ಅಲ್ಲೇ ಕೇಳಿದೆವು. ಅದಿತಿ ದೆಹಲಿಯಲ್ಲಿ ಇಳಿದುಕೊಂಡು ಅವರ ತಂದೆತಾಯಿಯರ ಮನೆಗೆ ಹೋಗಿರುವುದಾಗಿ ಅನಂತರ ಬೆಂಗಳೂರಿಗೆ ಬರುವುದಾಗಿ ತಿಳಿಸಿದ.

ಮನೆಗೆ ಬಂದು ತೇಜಸ್ ಸಾಮಾನುಗಳನ್ನೆಲ್ಲ ಕಾರಿನಿಂದ ಇಳಿಸಿ, ನಾವು ಮನೆ ಒಳಕ್ಕೆ ತಂದೆವು. ಕಾಫಿ ಕುಡಿದು ಮುಖ ತೊಳೆದುಕೊಂಡು ಕುಳಿತ ತೇಜಸ್ ನಿಧಾನವಾಗಿ ತನ್ನ ಸಮಸ್ಯೆಗಳನ್ನು ಒಂದೊಂದಾಗಿ ತೋಡಿಕೊಳ್ಳುತ್ತಿದ್ದ. ಕಾರಿನಲ್ಲಿ ಬರುವಾಗ ಮಾತನಾಡುವಾಗಲೇ ತೇಜಸ್ ಪರಿಸ್ಥಿತಿಯೂ ದಮಯಂತಿಯ ಹಾಗೆಯೆ ಆಗಿದೆ ಎನಿಸಿತು. ದಮಯಂತಿ ಅತ್ತುಕೊಂಡರೆ, ತೇಜಸ್ ಅಳಲಿಲ್ಲ ಅಷ್ಟೇ ವ್ಯತ್ಯಾಸ. ಸಾವಿತ್ರಿ ರಾತ್ರಿಗೆ ಚೆನ್ನಾಗಿ ಅಡುಗೆ ಮಾಡಿ ತನ್ನ ಮಗನ ಪಕ್ಕದಲ್ಲಿ ಕುಳಿತುಕೊಂಡು ಬಡಿಸುತ್ತ ತಿನ್ನಿಸಿದಳು. ನನ್ನನ್ನು ಹಣ ಕೇಳಿದ ಬಗ್ಗೆ ಜ್ಞಾಪಿಸಿ ನಿನಗೂ ಸ್ವಲ್ಪ ಹಣ ಇಟ್ಟಿರುವುದಾಗಿ ಹೇಳಿದೆ. ಅದಕ್ಕೆ ತೇಜಸ್ `ಅದನ್ನೂ ದಮಯಂತಿಗೆ ಕೊಟ್ಟುಬಿಡಿ. ಅವಳಿಗೆ ಅಗತ್ಯ ಇದೆ' ಎಂದ. `ಹೋಗುವಾಗ ನೀನೇ ಅದನ್ನು ಹೇಗಾದರು ಅವಳಿಗೆ ತಲುಪಿಸು. ಇಲ್ಲ, ಇಲ್ಲಿ ಇರುವಾಗಲೇ ಅವಳಿಗೆ ಬ್ಯಾಂಕ್ ಮೂಲಕ ತಲುಪಿಸಿಬಿಡು. ನಾಳೆ ಬೆಳಿಗ್ಗೆ ನಿನ್ನ ಕೈಗೆ ಹಣ ಕೊಡುತ್ತೇನೆ' ಎಂದೆ.

(ಸಶೇಷ)